ಬೇಸಿಗೆ ಭತ್ತಕ್ಕೆ ಪರ್ಯಾಯವಾಗಿ ಅಲಸಂದಿ ಬೆಳೆ

ರಾಯಚೂರು ಜಿಲ್ಲೆಯ ಅಚ್ಚುಕಟ್ಟು ಪ್ರದೇಶಗಳಲ್ಲಿ ಭತ್ತವನ್ನು ಸುಮಾರು 2.5 ಲಕ್ಷ ಎಕರೆ ಪ್ರದೇಶದಲ್ಲಿ ಮುಂಗಾರು ಬೆಳೆಯಾಗಿ ಹಾಗೂ 1 ಲಕ್ಷ ಎಕರೆ ಪ್ರದೇಶದಲ್ಲಿ ಬೇಸಿಗೆ ಬೆಳೆಯಾಗಿ ಬೆಳೆಯಲಾಗುತ್ತಿದೆ. ಆದರೆ ಬೇಸಿಗೆ ಭತ್ತ ಬೆಳೆ ಬೆಳೆಯುವುದರಿಂದ ಅನೇಕ ತೊಂದರೆಗಳು ಉದ್ಭವಿಸುತ್ತಿದ್ದು, ಅದರಲ್ಲಿ ಪ್ರಮುಖವಾಗಿ ಸಮಯಕ್ಕೆ ಸರಿಯಾಗಿ ನೀರು ಸಿಗದೆ ಇರುವುದು, ಅಸಮರ್ಪಕ ನೀರಿನ ಬಳಕೆ, ಕಾಲುವೆ ಕೊನೆ ಭಾಗದ ರೈತರಿಗೆ ನೀರು ದೊರಕದೆ ಇರುವುದು ಇತ್ಯಾದಿ. ಈ ಎಲ್ಲಾ ಸಮಸ್ಯೆಗಳೊಂದಿಗೆ ಭತ್ತ–ಭತ್ತ ಸದರಿ ಬೆಳೆಯಾಗಿ ಬೆಳೆಯುವುದರಿಂದ ಸಾಕಷ್ಟು ತೊಂದರೆ ಪಡಬೇಕಾಗುತ್ತದೆ. ಈ ಸಮಸ್ಯೆಗೆ ಪರಿಹಾರವಾಗಿ ಭತ್ತ–ಭತ್ತ ಬೆಳೆ ಪದ್ಧತಿಗೆ ಪರ್ಯಾಯವಾಗಿ ಭತ್ತ–ಅಲಸಂದಿ ಬೆಳೆ ಪದ್ಧತಿ ಅನುಸರಿಸುವುದು ಸೂಕ್ತ.

ಅಲಸಂದಿ ಕಡಿಮೆ ಅವಧಿಯಲ್ಲಿ ಅಂದರೆ ಸುಮಾರು 100 ದಿನಗಳಲ್ಲಿ ಕೊಯ್ಲಿಗೆ ಬರುವ ಬೆಳೆಯಾಗಿದ್ದು ಈ ಬೆಳೆಯನ್ನು ಭತ್ತದ ಕಟಾವು ಆದ ನಂತರ ಕಡಿಮೆ ತೇವಾಂಶದಲ್ಲಿ ಬೆಳೆದು ಲಾಭ ಪಡೆದುಕೊಳ್ಳಬಹುದಲ್ಲದೆ ರಾಯಚೂರು ಜಿಲ್ಲೆಯಲ್ಲಿ ಭತ್ತ ಕಟಾವು ಆದ ನಂತರ ಈ ಬೆಳೆಯನ್ನು ಬೆಳೆಯಲು ಪ್ರಾರಂಭಿಸಿದರೆ ಸುಮಾರು 50,000–1,00,000 ಎಕರೆ ಪ್ರದೇಶದವರೆಗೂ ವಿಸ್ತರಿಸಬಹುದು. ಉತ್ತಮ ಇಳುವರಿಗೆ ವೈಜ್ಞಾನಿಕ ಬೇಸಾಯ ಪದ್ಧತಿ ಅನುಸರಿಸುವುದು ಅತೀ ಅವಶ್ಯಕ. ಆದ್ದರಿಂದ ರೈತರು ಈ ಕೆಳಗೆ ವಿವರಿಸಲಾದ ಸುಧಾರಿತ ಬೇಸಾಯ ಪದ್ಧತಿಯ ಲಾಭ ಪಡೆದುಕೊಳ್ಳಲು ವಿನಂತಿಸಲಾಗಿದೆ.

ತಳಿ : ಸಿ–152, ಈ ತಳಿಯು 90–100 ದಿನಗಳಲ್ಲಿ ಮಾಗುವುದಲ್ಲದೆ ಭತ್ತ ಕಟಾವು ಆದ ನಂತರ ತಡ ಹಿಂಗಾರಿ ಹಾಗೂ ಬೇಸಿಗೆ ಬೆಳೆಯಾಗಿ ಬಿತ್ತನೆಗೆ ಯೋಗ್ಯವಿರುವುದು.

ಬೀಜೋಪಚಾರ : ಒಂದು ಎಕರೆಗೆ ಬೇಕಾಗುವ ಬಿತ್ತನೆ ಬೀಜಕ್ಕೆ (6–7 ಕಿ.ಗ್ರಾಂ) 200 ಗ್ರಾಂ ರೈಜೋಬಿಯಂ, 200 ಗ್ರಾಂ ರಂಜಕ ಕರಗಿಸುವ ಜೈವಿಕ ಗೊಬ್ಬರ ಹಾಗೂ 30 ಗ್ರಾಂ ಟ್ರೈಕೋಡರ್ಮಾ ಜೈವಿಕ ಶಿಲೀಂಧ್ರ ನಾಶಕ ಪುಡಿಯಿಂದ ಬೀಜೋಪಚಾರ ಮಾಡಬೇಕು.

ಬಿತ್ತನೆ : ಭತ್ತ ಕಟಾವು ಆದ ನಂತರ ಭೂಮಿಗೆ ಟಿಲ್ಲರ್ ಹಾಕಿ ನಂತರ ನೀರಿನ ಸೌಲಭ್ಯವಿದ್ದಲ್ಲಿ ಒಂದು ಸಲ ನೀರು ಹಾಯಿಸಿ ನಂತರ ಬಿತ್ತನೆ ಮಾಡಬೇಕು. ಅಥವಾ ಭೂಮಿಯಲ್ಲಿ ತೇವಾಂಶವಿದ್ದರೆ ರಿಲೆ ಪ್ಲಾಂಟರ್ ಅಥವಾ ಟ್ರ್ಯಾಕ್ಟರ್ ಚಾಲಿತ ಕುರಿಗೆಯಿಂದ ನೇರವಾಗಿ ಬಿತ್ತನೆ ಮಾಡಬಹುದು. ಬಿತ್ತನೆಯನ್ನು 45 ಸೆಂ.ಮೀ. ಅಂತರದ ಸಾಲುಗಳಲ್ಲಿ ಬೀಜದಿಂದ ಬೀಜಕ್ಕೆ 7.5–10 ಸೆಂ.ಮೀ. ಅಂತರದಲ್ಲಿ ಬಿತ್ತನೆ ಮಾಡಬೇಕು.

ಗೊಬ್ಬರ: ಲಿಂಗಸೂಗುರು ಮತ್ತು ಸಿಂಧನೂರು ತಾಲ್ಲೂಕುಗಳಲ್ಲಿ ಬಿತ್ತನೆ ಮಾಡಿದರೆ ಪ್ರತಿ ಎಕರೆಗೆ 25 ಕಿ.ಗ್ರಾಂ ಡಿ.ಎ.ಪಿ., 10 ಕಿ.ಗ್ರಾಂ. ಪೋಟ್ಯಾಷ್ ಹಾಗೂ 40 ಕಿ.ಗ್ರಾಂ ಜಿಪ್ಸಂ ಮತ್ತು ರಾಯಚೂರು, ಮಾನ್ವಿ, ದೇವದುರ್ಗ ತಾಲ್ಲೂಕುಗಳಲ್ಲಿ ಬಿತ್ತನೆ ಮಾಡಿದರೆ ಪ್ರತಿ ಎಕರೆಗೆ 50 ಕಿ.ಗ್ರಾಂ. ಡಿ.ಎ.ಪಿ., 10 ಕಿ.ಗ್ರಾಂ. ಪೋಟ್ಯಾಷ್ ಹಾಗೂ 40 ಕಿ.ಗ್ರಾಂ ಜಿಪ್ಸಂ ಅನ್ನು ಬಿತ್ತನೆ ಬೀಜದಿಂದ 10 ಸೆಂ.ಮೀ. ದೂರವಿರುವಂತೆ ಮಣ್ಣಿನಲ್ಲಿ ಸೇರಿಸಬೇಕು.

ಅಂತರ ಬೇಸಾಯ ಹಾಗೂ ಕಳೆ ನಿಯಂತ್ರಣ : ಬಿತ್ತನೆ ಮಾಡಿದ 20–25 ದಿನಗಳಿಗೆ ಹಾಗೂ 35–40 ದಿನಗಳಿಗೆ ಎರಡು ಸಲ ಅಂತರ ಬೇಸಾಯ ಮಾಡಿ ಕಳೆಗಳನ್ನು ಹತೋಟಿ ಮಾಡಬೇಕು.

ನೀರಾವರಿ : ನೀರಿನ ಸೌಲಭ್ಯವಿದ್ದಲ್ಲಿ ಬೆಳೆಯು ಹೂವಾಡುವ ಹಂತದಲ್ಲಿ ಇದ್ದಾಗ ಒಂದು ಸಲ ತೆಳ್ಳಗೆ ನೀರೂ ಹಾಯಿಸಬೇಕು.

ಪೋಷಕಾಂಶಗಳ ಸಿಂಪರಣೆ : ಬೆಳೆಯು ಹೂವಾಡುವ ಹಾಗೂ ಕಾಳು ಕಟ್ಟು ಹಂತದಲ್ಲಿ ಇದ್ದಾಗ ಪ್ರತಿ ಲೀಟರ್ ನೀರಿಗೆ 10 ಗ್ರಾಂ 19:19:19 ಅನ್ನು ಸಿಂಪರಣೆ ಮಾಡಬೇಕು.

ಕೀಟಗಳು ಹಾಗೂ ಅವುಗಳ ನಿಯಂತ್ರಣ : ಅಗ್ರೋಮೈಜಿಡ್ ನೊಣ, ಸಸ್ಯಹೇನು ಮತ್ತು ಕಾಯಿ ಕೊರೆಯುವ ಹುಳು ಹೆಚ್ಚಿನ ಬಾಧೆಯನ್ನುಂಟು ಮಾಡುತ್ತವೆ. ಅಗ್ರೋಮೈಜಿಡ್ ನೊಣದ ನಿಯಂತ್ರಣಕ್ಕಾಗಿ 1.7 ಮಿ.ಲೀ. ಡೈಮಿಥೋಯೆಟ್ 30 ಇ.ಸಿ ಅಥವಾ 0.5 ಮಿ.ಲೀ. ಪಾಸ್ಫಾಮಿಡಾನ್

85 ಡಬ್ಲ್ಯೂ.ಎಸ್.ಸಿ. ಪ್ರತಿ ಲೀ. ನೀರಿಗೆ ಬೆರೆಸಿ ಸಿಂಪಡಿಸಬೇಕು. ಈ ಕೀಟದ ಬಾಧೆ ತಡೆಯಲು ಬಾಡುತ್ತಿರುವ ಸಸಿಗಳನ್ನು ಕಿತ್ತು ನೆಲದಲ್ಲಿ ಹುಗಿದರೆ ಮುಂದಿನ ಸಂತತಿಯನ್ನು ತಡೆಗಟ್ಟಬಹುದು. ಮತ್ತು ಕಾಯಿ ಕೊರೆಯುವ ಹುಳುಗಳಿಗೆ 0.5 ಮಿ.ಲೀ. ಫೆನವಲ್‌ರೇಟ್ 20 ಇ.ಸಿ. ಅಥವಾ 2 ಮಿ.ಲೀ. ಕ್ವಿನಾಲ್‌ಫಾಸ್ 25 ಇ.ಸಿ. ಅನ್ನು ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪರಣೆ ಮಾಡಬೇಕು. ಸಸ್ಯಹೇನುಗಳ ನಿಯಂತ್ರಣಕ್ಕಾಗಿ 1 ಮಿ.ಲೀ. ಮೀಥೈಲ್ ಪ್ಯಾರಾಥೀಯಾನ್ 50 ಇ.ಸಿ. ಅಥವಾ 1 ಮಿ.ಲೀ. ಮೊನೋಕ್ರೊಟಾಫಾಸ್ 36 ಇ.ಸಿ. ಅಥವಾ 1.7 ಮಿ.ಲೀ. ಡೈಮಿಥೋಯೆಟ್ 30 ಇ.ಸಿ ಪ್ರತಿ ಲೀ. ನೀರಿಗೆ ಬೆರೆಸಿ ಸಿಂಪಡಿಸಬೇಕು.

ರೋಗಗಳು ಹಾಗೂ ಅವುಗಳ ನಿಯಂತ್ರಣ : ನಂಜು ರೋಗಕ್ಕೆ ತುತ್ತಾದ ಸಸಿಗಳನ್ನು ಪ್ರಾರಂಭ ಹಂತದಲ್ಲಿ ಕಿತ್ತು ಸುಡಬೇಕು. ಮತ್ತು ಬೂದಿ ರೋಗ ತಗುಲಿದರೆ 3.0 ಗ್ರಾಂ ಶೇ. 80 ರ ನೀರಿನಲ್ಲಿ ಕರಗುವ ಗಂಧಕ ಅಥವಾ 1 ಗ್ರಾಂ ಕಾರ್ಬನ್‌ಡೈಜಿಮ್ ಅನ್ನು 1 ಲೀ. ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು. ಎಲೆಚುಕ್ಕೆ ರೋಗದ ಬಾಧೆ ಕಂಡು ಬಂದಲ್ಲಿ ಪ್ರತಿ ಲೀ. ನೀರಿಗೆ 2 ಗ್ರಾಂ ಜೈನೆಬ್ 75 ಡಬ್ಲ್ಯೂ.ಪಿ. ಅಥವಾ ಮೆಂಕೋಜೆಬ್ 75 ಡಬ್ಲ್ಯೂ.ಪಿ. ಅಥವಾ 3 ಗ್ರಾಂ ತಾಮ್ರದ ಆಕ್ಸಿಕ್ಲೋರೈಡ್ 50 ಡಬ್ಲ್ಯೂ.ಪಿ. ಬೆರೆಸಿ ಸಿಂಪಡಿಸಬೇಕು.

ಸೂಚನೆಗಳು :

1. ಕೀಟಗಳು ಮತ್ತು ರೋಗಗಳ ಬಾಧೆಯ ಲಕ್ಷಣಗಳು ಕಂಡಾಗ ಮಾತ್ರ ಸಸ್ಯ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳಬೇಕು. ಕಳೆದ ವರ್ಷ ಕೀಟಗಳ ಮತ್ತು ರೋಗಗಳ ಬಾಧೆಯಿದ್ದ ಪ್ರದೇಶಗಳಲ್ಲಿ ಮುಂಜಾಗ್ರತಾ ಸಸ್ಯ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳಬೇಕು.
2. ಈ ಬೆಳೆಗೆ ಶಿಫಾರಸ್ಸು ಮಾಡಿರುವ ರಾಸಾಯನಿಕಗಳ ಪ್ರಮಾಣವು ದೊಡ್ಡ ಪ್ರಮಾಣದ ಸಿಂಪರಕಗಳಿಗೆ ಮಾತ್ರ ಅನ್ವಯಿಸುತ್ತದೆ.

ಲೇಖಕರು: ಡಾ. ಮಲ್ಲರೆಡ್ಡಿ
ಡಾ. ತಿಮ್ಮಣ್ಣ
ಡಾ. ಶ್ರೀವಾಣಿ ಜಿ.ಎನ್
ಇಂ. ವೀಣಾ ಟಿ.
ಡಾ. ಉಮೇಶ ಬಾಬು ಬಿ. ಎಸ್.
ಡಾ. ವೀಣಾ ಎಸ್. ಕಂಬಳಿ
ಡಾ. ಅಫ್ಸಾನಬಾನು ಮಾಣಿಕ್
ಪುಟ ವಿನ್ಯಾಸ &
ಅಕ್ಷರ ಜೋಡಣೆ : ಶ್ರೀ. ದೇವರಾಜ ನಾಯಕ್

ಗೌರವ ಸಲಹೆಗಾರರು: ಡಾ. ಎ ಆರ್ ಕುರುಬರ
ವಿಸ್ತರಣಾ ನಿರ್ದೇಶಕರು,
ಕೃ.ವಿ.ವಿ., ರಾಯಚೂರು

UASR/PC/LL28B/2025-26





ಕೃಷಿ ವಿಶ್ವವಿದ್ಯಾಲಯ, ರಾಯಚೂರು
ಕೃಷಿ ವಿಸ್ತರಣಾ ನಿರ್ದೇಶನಾಲಯ
ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು

ಬೇಸಿಗೆ ಭತ್ತಕ್ಕೆ ಪರ್ಯಾಯವಾಗಿ ಅಲಸಂದಿ ಬೆಳೆ



ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು
ಅಂಚೆ ಪೆಟ್ಟಿಗೆ ಸಂಖ್ಯೆ–329, ರಾಯಚೂರು–584102
ದೂರವಾಣಿ ಸಂಖ್ಯೆ: 0832–220196
e-mail: kvkraichur@gmail.com